**ಸಾಕ್ಷಿಯನ್ನು ಪುನಃ ಕರೆಯಿಸಿ ದಿಃ *04-08-2023* ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ ಶ್ರೀ ಎಂ.ಬಿ.ಎನ್. ಪ್ರತಿವಾದಿಯ ಪರ ವಕೀಲರಿಂದ**

ನಾನು *7* ನೇ ತರಗತಿಯವರೆಗೆ ಓದಿದ್ದೇನೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣದ ಪತ್ರದಲ್ಲಿನ ಅಂಶಗಳು ನನಗೆ ಗೊತ್ತು. ಪ್ರತಿವಾದಿ-*1* ರಿಂದ *4* ರವರು ನನ್ನ ತಂದೆ ಚನ್ನೇಗೌಡರ ಅಣ್ಣ ಈರೇಗೌಡರ ಮಕ್ಕಳು ಎಂದರೆ ಸರಿ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನ ನಡುವೆ ಆದಂತಹ ದಿಃ *30-10-1980* ರ ಪಾಲುಪಟ್ಟಿಯ ಅಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ದಾವಾ ಸ್ವತ್ತಿನ ಸರ್ವೆ ನಂಬರ್ *209.* ದಾವಾ ಸ್ವತ್ತಿನ ಹಳೆ ಸರ್ವೆ ನಂಬರ್ *145* ಎಂದರೆ ಸರಿಯಲ್ಲ. ಸರ್ವೆ ನಂಬರ್ *209* ನನ್ನ ತಾತನ ಪಿತ್ರಾರ್ಜಿತ ಸ್ವತ್ತು. ಮೊದಲು ಸರ್ವೆ ನಂಬರ್ *209* ರಲ್ಲಿ ಎರಡು ಎಕರೆ ನಾಲ್ಕು ಗುಂಟೆ ವಿಸ್ತೀರ್ಣ ಇತ್ತು. ನಂತರ ಪಾಲು ಪಟ್ಟಿಯಂತೆ ನನ್ನ ತಂದೆಗೆ ಒಂದು ಎಕರೆ ಎರಡು ಗುಂಟೆ ಬಂದಿತ್ತು. ನ್ಯಾಯಾಲಯದಲ್ಲಿ ಸರ್ವೆ ನಂಬರ್ *209* ರಲ್ಲಿ ಮೂವತೊಂಬತ್ತು ಗುಂಟೆಗೆ ಪಹಣಿ ನನ್ನ ತಂದೆಯ ಹೆಸರಿನಲ್ಲಿ ಇದೆ. ಸಾಕ್ಷಿಗೆ ನಿ.ಪಿ. *1* ನ್ನು ತೋರಿಸಲಾಗಿ ಸರ್ವೆ ನಂಬರ್ *209* ಪೈಕಿ ಪಿ*2* ಪಿ*1* ರಲ್ಲಿ ಚನ್ನಪ್ಪ ಬಿನ್ ಚನ್ನೇಗೌಡರವರ ಹೆಸರಿಗೆ ಮೂವತ್ತು ಮೂರು ಗುಂಟೆ ಬರುತ್ತಿದೆ ಎಂದು ಸಾಕ್ಷಿಯು ಹೌದು ಎಂದು ಮುಂದುವರೆದು ದಾವಾ ಹಾಕಿದ ನಂತರ ಆರು ಗುಂಟೆಯನ್ನು ಭೂ ಸ್ವಾಧೀನ ಮಾಡಿಕೊಂಡಿದ್ದು, ಈಗ ಉಳಿಕೆ ಮೂವತ್ಮೂರು ಗುಂಟೆ ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿ ನನ್ನ ದೊಡ್ಡಪ್ಪನ ಸ್ವತ್ತಿನಲ್ಲಿ ಅವರಿಗೆ ಕೊಟ್ಟಿದ್ದ ಒಂದು ಎಕರೆ ಎರಡು ಗುಂಟೆ ಸ್ವತ್ತು ನಾಲೆಗೆ ಭೂ ಸ್ವಾಧೀನವಾಗಿದೆ.

*2.* ವಿಶೇಷ ಭೂ ಸ್ವಾಧೀನಾಧಿಕಾರಿ ಮಂಡ್ಯ ರವರು ಸರ್ವೆ ನಂಬರ್ *209* ರಲ್ಲಿ ಒಂದು ಎಕರೆ ಇಪ್ಪತ್ತೆಂಟು ಗುಂಟೆ ವಿ.ಸಿ. ಸಂಪರ್ಕ ನಾಲೆಗಾಗಿ ಭೂ ಸ್ವಾಧೀನ ಮಾಡಿರುವುದಾಗಿ ಪತ್ರ ವ್ಯವಹಾರಗಳು ಆಗಿವೆ ಎಂದರೆ ಸರಿ. ಸಾಕ್ಷಿಯು ಭೂ ಸ್ವಾಧೀನಾಧಿಕಾರಿಯವರು ನಂತರ ಅಳತೆ ಮಾಡಿ ತಿದ್ದುಪಡಿ ಮಾಡಿದ್ದಾರೆಂದು ಹೇಳುತ್ತಾರೆ. ನಮ್ಮ ಸ್ವತ್ತಿನಲ್ಲಿ ಭೂ ಸ್ವಾಧೀನವಾಗಿ ಉಳಿಕೆ ಹದಿಮೂರು ಗುಂಟೆ ಮಾತ್ರ ಇದೆ ಎಂದರೆ ಸರಿಯಲ್ಲ. ಆರು ಗುಂಟೆ ನಮ್ಮ ಸ್ವತ್ತು ಭೂಸ್ವಾಧೀನವಾಗಿದ್ದು ಅದಕ್ಕೆ ಪರಿಹಾವನ್ನು ಕೊಟ್ಟಿಲ್ಲ.

*3.* ಸಾಕ್ಷಿಗೆ ದಿಃ *24-12-1991* ರಲ್ಲಿ ಈರೇಗೌಡ ಮತ್ತು ಚನ್ನೇಗೌಡರ ನಡುವೇ ಆಗಿದೆ ಎನ್ನುವ ವರ್ಗಾವರ್ಗಿ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ನಿರಾಕರಿಸಿರುತ್ತಾರೆ. ಸದರಿ ವರ್ಗಾವರ್ಗಿ ಪತ್ರದಂತೆ ಸರ್ವೆ ನಂಬರ್ *209* ರಲ್ಲಿ ಒಂದು ಎಕರೆ ಇಪ್ಪತ್ತೆಂಟು ಗುಂಟೆ ಭೂ ಸ್ವಾಧೀನವಾಗಿದ್ದು ಉಳಿಕೆ ಹದಿಮೂರು ಗುಂಟೆಗೆ ವಿಭಾಗ ಮಾಡಿಕೊಂಡಿದ್ದು, ಸದರಿ ಸ್ವತ್ತಿನ ಪೂರ್ವದ ಭಾಗದ ಎಂಟು ಗುಂಟೆಯನ್ನು *1* ನೇ ಪ್ರತಿವಾದಿಗೆ, ಪಶ್ಚಿಮದ ಉಳಿದ ಐದು ಗುಂಟೆಯನ್ನು ನನ್ನ ತಂದೆಗೆ ಕೊಡಲಾಗಿದೆ ಎಂದರೆ ಸರಿಯಲ್ಲ. ಸದರಿ ಪತ್ರದಲ್ಲಿ ಭೂಾ ಸ್ವಾಧೀನಾಧಿಕಾರಿಗಳು ನೀಡುವ ಪರಿಹಾರದ ಮೊತ್ತವನ್ನು ಸಮನಾಗಿ ಹಂಚಿಕೊಳ್ಳಲು ಬರೆಯಲಾಗಿದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ *209* ರಲ್ಲಿ ಸ್ವತ್ತಿಗೆ ಹೊಂದಿಕೊಂಡಂತೆ ಇಪ್ಪತ್ತು ಗುಂಟೆ ಕರಾಬು ಇದೆ ಎಂದರೆ ಸರಿ. ವರ್ಗಾವರ್ಗಿ ಪತ್ರದಲ್ಲಿ *1* ನೇ ಪ್ರತಿವಾದಿಗೆ ಬಂದ ಎಂಟು ಗುಂಟೆ ಸ್ವತ್ತಿನ ಭಾಗಕ್ಕೆ ಇರುವ ಕರಾಬಿನಲ್ಲಿ ಅವರು ಉಳುಮೆ ಮಾಡುವಂತೆ ಐದು ಗುಂಟೆ ಸ್ವತ್ತಿನ ಭಾಗಕ್ಕೆ ಅಂಟಿಕೊಂಡಿರುವ ಕರಾಬು ಸ್ವತ್ತಿನಲ್ಲಿ ನನ್ನ ತಂದೆ ಉಳುಮೆ ಮಾಡುವಂತೆ ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಭೂ ಸ್ವಾಧೀನಗೊಂಡ ಒಂದು ಎಕರೆ

ಇಪ್ಪತೆಂಟು ಗುಂಟೆಯಲ್ಲಿ ನಾಲಾ ಇಲಾಖೆಯವರು ಉಳಿಸಿರುವ ಸ್ವತ್ತಿನಲ್ಲಿ *1* ನೇ ಪ್ರತಿವಾದಿಯವರು ಉಳುಮೆ ಮಾಡುತ್ತಿದ್ದಾರೆಂದರೆ ಸರಿಯಲ್ಲ.

*4.* ದಿಃ *15-02-2004* ರಂದು ಭೂ ಸ್ವಾಧೀನಾಧಿಕಾರಿಗಳು ನೀಡಿದ ಪರಿಹಾರದ ಮೊತ್ತವನ್ನು ನನ್ನ ತಂದೆ ಮತ್ತು ದೊಡ್ಡಪ್ಪ ಪಂಚಾಯಿತಿ ಪಾಲು ಪಟ್ಟಿಯನ್ನು ಬರೆದುಕೊಂಡು ಸಮನಾಗಿ ಹಂಚಿಕೊಂಡಿದ್ದಾರೆಂದರೆ ಸರಿಯಲ್ಲ.

ಮುಂದುವರೆದ ಪಾಟಿ ಸವಾಲು ಸಮಯ ಕೋರಿದ್ದು, ಸಮಯ ನೀಡಲಾಯಿತು.

*(*ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯ್ತು*).*

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಪಾಂಡವಪುರ.